'ಆಸೆಯೇ ದುಃಖಕ್ಕೆ ಕಾರಣ'

'ಹೀಗಂತ ಹೇಳಿದವರಾರು?'

'ನಾನಲ್ಲ, ನಾನಲ್ಲ' ಎಂಬ ನಕಾರಾತ್ಮಕ ಶಬ್ದವು ಗೆಳೆಯರ ಗುಂಪಿನಲ್ಲಿದ್ದ ಪ್ರತಿಯೊಬ್ಬರ ಬಾಯಿಂದಲೂ ಪ್ರತ್ಯೇಕ ಪ್ರತ್ಯೇಕವಾಗಿ ಉದುರಿತು.

ಹೀಗೆ ಹೇಳಿದವ ಸದ್ಯ ನಾನೂ ಆಗಿರಲಿಲ್ಲ. ಆದ ಕಾರಣ ನನ್ನ ಬಾಯಿಂದಲೂ 'ನಾನಲ್ಲ' ಎಂಬ ಶಬ್ದವು ಉದುರಿತು.

ಆದರೆ, ಯಾರೋ ಹೇಳದೆ ಈ ಮಾತು ಚಾಲ್ತಿಗೆ ಬರಲು ಸಾಧ್ಯವೆ ಇಲ್ಲ ಅಲ್ಲವೇ? ಅದು ಯಾರು ಅಂತ ಮೊದಲಿಗೆ ಪತ್ತೆಯಾಗಬೇಕು. ಏಕೆಂದರೆ, ಆ ಮಾತು(ವಾಕ್ಯ) ಅಷ್ಟೊಂದು ಜನಪ್ರಿಯವಾದುದು. ಸರಿ. ನಮ್ಮ ಗುಂಪಿನವರೆಲ್ಲ ಸೇರಿ ಸಣ್ಣ ಮಟ್ಟದ ಒಂದು ಸಂಶೋಧನೆಗೆ ಇಳಿದೆವು.

ಕೊನೆಗೆ ಒಂದು ದಿನ ನಮ್ಮ ಸಂಶೋಧನೆಯ ಫಲವಾಗಿ ಈ ಮಾತು ಹೇಳಿದ ಆಸಾಮಿ ಸಿಕ್ಕಿಬಿದ್ದ. ಅವನು ಇನ್ನಾರೂ ಅಲ್ಲ. ನಮ್ಮ ಬುದ್ಧ. ಈ ಕಾಲದವನಂತೂ ಅಲ್ಲ ಎಂಬ ವಿಚಾರ ನಮ್ಮ ಸಂಶೋಧನಾ ತಂಡಕ್ಕೆ ಮನವರಿಕೆಯಾಯಿತು. ಅವನು ಸುಮಾರು ಎರಡು ಸಾವಿರದ ಐದುನೂರು ವರ್ಷಗಳಷ್ಟು ಹಿಂದೆ ಇದ್ದವನು. ಅಂದರೆ ಬಹಳ ಹಳಬ. ಅವನ ಹೆಸರಿನಲ್ಲಿ ಒಂದು ಮತ ಕೂಡ ಇದೆ. ಜೊತೆಗೆ ಅವನನ್ನು ವಿಷ್ಣುವಿನ ದಶಾವತಾರದಲ್ಲೂ ಒಂಬತ್ತನೆಯವನನ್ನಾಗಿ ಸೇರಿಸಿಕೊಂಡಾಗಿದೆ. ಹಾಗಾಗಿ, ಅವನು ಹೇಳಿದ ಮೇಲಿನ ಮಾತಿಗೆ ಸಾಕಷ್ಟು ಬೆಲೆ ಬಂದಿದೆ.

ಅದು ಸರಿ. ಅವನು ಯಾವ ಕಾಲದಲ್ಲಿ ಬೇಕಾದರೂ ಇದ್ದುಕೊಳ್ಳಲಿ. ಅದು ಅವನ ಇಷ್ಟಕ್ಕೆ ಬಿಟ್ಟ ವಿಚಾರ. ಅದರಿಂದ ನನಗೆ ಆಗಬೇಕಾದ್ದೇನೂ ಇಲ್ಲ. ಆದರೆ, 'ಆಸೆಯೇ ದುಃಖಕ್ಕೆ ಕಾರಣ' ಎಂಬ ಅಭಿಪ್ರಾಯಕ್ಕೆ ಅಥವಾ ತೀರ್ಮಾನಕ್ಕೆ ಅವನು ಯಾಕೆ ಬಂದ? ಅದು ಅವನ ಅನುಭವ ಜನ್ಯ ವಿಚಾರವೋ ಅಥವಾ ನಾಲ್ಕಾರು ಜನ ಸೇರಿ ಸಂಶೋಧನೆ ನಡೆಸಿ ಕಂಡುಕೊಂಡ ಫಲಿತಾಂಶವೋ? ಈ ಬಗೆಗೆ ನನ್ನಲ್ಲಂತೂ ಮಾಹಿತಿ ಇಲ್ಲ. ಅಲ್ಲದೆ ಈ ಹೇಳಿಕೆಗೆ ನನ್ನ ಸಹಮತವೂ ಇಲ್ಲ.

ನಾಲ್ಕಾರು ಜನರ ಒಂದು ಪುಟ್ಟ ಗುಂಪಿನೊಡನೆ ಆತ ಚರ್ಚಿಸಿ ಈ ತೀರ್ಮಾನಕ್ಕೇನಾದರೂ ಬಂದಿದ್ದರೆ, ಆ ಸಂದರ್ಭದಲ್ಲಿ ಆ ಗುಂಪಿನಲ್ಲಿ ನಾನೇನಾದರೂ ಇದ್ದಿದ್ದರೆ, ಈ ಮಾತಿಗೆ ನಾನೊಂದು ತಿದ್ದುಪಡಿಯನ್ನು ಸೂಚಿಸುತ್ತಿದ್ದೆ. ಯಾವುದು ಆ ತಿದ್ದುಪಡಿ ಅಂತ ಕೇಳುತ್ತೀರೋ? ಅದೇನೂ ಮೂಲವನ್ನು ತುಂಬಾ ಬದಲಾದರೆ ಮಾಡುವಂತಹ ತಿದ್ದುಪಡಿ ಅಲ್ಲ.

'ಆಸೆಯೇ ದುಃಖಕ್ಕೆ ಕಾರಣ' ಅನ್ನುವುದರ ಬದಲು 'ದುರಾಸೆಯೇ ದುಃಖಕ್ಕೆ ಕಾರಣ' ಅಂತ ಸಣ್ಣದೊಂದು ತಿದ್ದುಪಡಿ ಮಾಡಿಕೊಳ್ಳಿ ಅಂತ ನಾನು ಬುದ್ಧನಲ್ಲಿ ವಿನಂತಿಸಿಕೊಳ್ಳುತ್ತಿದ್ದೆ. ಆಗ ಈ ತಿದ್ದುಪಡಿಗೆ ಪ್ರಬುದ್ಧವಾದ ನಮ್ಮ ಬುದ್ಧ ಬದ್ಧನಾಗಿದ್ದಿದ್ದರೆ ನನಗಿಂತ ಸಂತಸಪಡುವವರು